# ಭಾರತದಲ್ಲಿ ಶಿಕ್ಷಣ ವ್ಯವಸ್ಥೆಯ ರಚನೆ ಮತ್ತು ಹಣಕಾಸು ಪೂರೈಕೆ

ಭಾರತದ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯು ಹದಿನೈದು ಕೋಟಿ ದಾಖಲಾತಿಯೊಂದಿಗೆ ಪ್ರಪಂಚದಲ್ಲೇ ಎರಡನೆಯ ಸ್ಥಾನದಲ್ಲಿದೆ. ಅದು ಈ ಕೆಳಗಿನ ಘಟಕಗಳನ್ನು ಒಳಗೊಂಡಿದೆ:

a. ಪ್ರಾಥಮಿಕ ಪೂರ್ವ ಶಿಕ್ಷಣ
b. ಪ್ರಾಥಮಿಕ ಶಾಲಾ ಶಿಕ್ಷಣ
c. ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಣ ಮತ್ತು
d. ಅನೌಪಚಾರಿಕ ಶಿಕ್ಷಣ

ಪ್ರಾಥಮಿಕ ಪೂರ್ವ ಅಥವಾ ಶಾಲಾ ಪೂರ್ವ ಶಿಕ್ಷಣವು ತಾಂತ್ರಿಕವಾಗಿ ಪ್ರಾಥಮಿಕ ಶಿಕ್ಷಣದ ಒಂದು ಭಾಗವಲ್ಲ. ಅದು ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ, ಸಮರ್ಪಕವಾಗಿ ಅಭಿವೃದ್ಧಿ ಹೊಂದಿಲ್ಲ. ಆದರೂ ಸಹ ನಾವು ಅದನ್ನು ಈ ಶಿಕ್ಷಣ ವ್ಯವಸ್ಥೆಯ ಒಂದು ಭಾಗವಾಗಿ ಪರಿಗಣಿಸಿದ್ದೇವೆ. ಇದಕ್ಕೆ ಕಾರಣ ಎಂದರೆ ಅದು ಮಕ್ಕಳನ್ನು ಶಾಲಾ ಶಿಕ್ಷಣಕ್ಕೆ ಸಿದ್ಧಗೊಳಿಸುವುದರಲ್ಲಿ ಹೊಂದಿರುವ ಮಹತ್ವವೇ ಆಗಿದೆ. ಭಾರತದಲ್ಲಿ ಆರಂಭಿಕ ಅವಧಿಯ ಶಿಶುಪಾಲನೆ ಹಾಗೂ ಶಿಕ್ಷಣವನ್ನು (Early Childhood Care and Education(ECCE)) ಮಗುವಿನ ಬೆಳವಣಿಗೆಯಲ್ಲಿ ಒಂದು ಮಹತ್ವಪೂರ್ಣ ಪೂರ್ವಸಿದ್ಧತೆ ಎಂದು ಪರಿಗಣಿಸಲಾಗುತ್ತದೆ. ಇದು ಕಲಿಕೆಯಲ್ಲಿ ಅಗತ್ಯವಾದ ಶೈಕ್ಷಣಿಕ ಸೌಲಭ್ಯಗಳನ್ನು ಒಳಗೊಳ್ಳುತ್ತದೆ. ಸುವ್ಯವಸ್ಥಿತವಾದ ಮತ್ತು ವ್ಯವಸ್ಥಿತವಲ್ಲದ ಆಟ ಚಟುವಟಿಕೆಗಳು, ಆರೋಗ್ಯಪಾಲನೆ ಹಾಗೂ ಪೋಷಣೆ ಈ ಸೌಲಭ್ಯಗಳಲ್ಲಿ ಸೇರಿವೆ. 'ದಿನದ ಪಾಲನಾ ಕೇಂದ್ರಗಳು (Day Care Centres)' ಬಡವರ್ಗಕ್ಕೆ ಸೇರಿದ ದುಡಿಯುವ ಮಹಿಳೆಯರಿಗೆ ಅನುಕೂಲವಾಗುವ ಮತ್ತೊಂದು ನವೀನ ಕಾರ್ಯವಿಧಾನವಾಗಿದ್ದು, ತಮ್ಮ ಎಳೆಯ ಸೋದರ-ಸೋದರಿಯರನ್ನು ಪಾಲಿಸಬೇಕಾದ ಹುಡುಗಿಯರಿಗೆ ಶಾಲೆಗೆ ಹಾಜರಾಗಲು ಸಾಧ್ಯವಾಗಿಸುವ ಬೆಂಬಲ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.

ಅನೇಕ ರಾಜ್ಯಗಳಲ್ಲಿ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಣವು ಒಂದನೇ ತರಗತಿಯಿಂದ ಎಂಟನೇ ತರಗತಿಯವರೆಗಿದ್ದರೆ, ಇನ್ನು ಕೆಲವು ರಾಜ್ಯಗಳಲ್ಲಿ ಇದು ಒಂದನೇ ತರಗತಿಯಿಂದ ಏಳನೇ ತರಗತಿಯವರೆಗೆ ಇರುತ್ತದೆ. ನಾವು ನಮ್ಮ ಪ್ರಸಕ್ತ ಉದ್ದೇಶಕ್ಕಾಗಿ ಐದರಿಂದ ಹದಿನಾಲ್ಕು ವರ್ಷಗಳ ವಯೋಮಿತಿಯ ಕಲಿಕೆಯನ್ನು (ಪ್ರಾಥಮಿಕ ಪೂರ್ವಕಲಿಕೆಯೂ ಸೇರಿದಂತೆ) ಭಾರತದ ಪ್ರಾಥಮಿಕ ಶಿಕ್ಷಣದ ದೃಷ್ಟಿಕೇಂದ್ರವಾಗಿ ಪರಿಗಣಿಸಿದ್ದೇವೆ.

## ಶೈಕ್ಷಣಿಕ ನೀತಿ ಮತ್ತು ಯೋಜನೆ: ವಿವಿಧ ಹಂತದಲ್ಲಿನ ಪ್ರಕ್ರಿಯೆ

ಭಾರತದಲ್ಲಿ ಶೈಕ್ಷಣಿಕ ನೀತಿ ಮತ್ತು ಯೋಜನೆಯು ಕೇಂದ್ರ ಹಾಗೂ ರಾಜ್ಯಸರ್ಕಾರಗಳ ಜಂಟಿ ನಿರ್ವಹಣೆಗೆ ಒಳಪಟ್ಟಿದೆ. ಕೇಂದ್ರದ ಯೋಜನಾ ಆಯೋಗದ ಶೈಕ್ಷಣಿಕ ವಿಭಾಗ ಮತ್ತು ರಾಜ್ಯಗಳ ಯೋಜನಾ ಇಲಾಖೆಗಳು ಇದಕ್ಕೆ ಜವಾಬ್ದಾರಿಯಾಗಿವೆ. ರಾಜ್ಯ ಮತ್ತು ಕೇಂದ್ರದ ನಡುವಿನ ಸಮನ್ವಯವು ಕೇಂದ್ರದ ಶಿಕ್ಷಣ ಇಲಾಖೆಯ ಯೋಜನೆ ಹಾಗೂ ಉಸ್ತುವಾರಿ ವಿಭಾಗ (Planning and Monitoring Division of Department of Education) ದಿಂದ ನಿರ್ವಹಿಸಲ್ಪಡುತ್ತದೆ. ಯೋಜನಾ ಪ್ರಕ್ರಿಯೆಯ ಅನೇಕ ತಾಂತ್ರಿಕ ಕಾರ್ಯಗಳನ್ನು ಕೇಂದ್ರ ಶೈಕ್ಷಣಿಕ ಸಲಹಾ ಮಂಡಳಿ

(Central Advisory Board of Education (CABE)) ನಿರ್ವಹಿಸುತ್ತದೆ. ಈ ಮಂಡಳಿಯಲ್ಲಿ a) ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಶಿಕ್ಷಣ ಸಚಿವರುಗಳು b) ರಾಷ್ಟ್ರದ ಪ್ರಮುಖ ಶಿಕ್ಷಣತಜ್ಞರು, ಮತ್ತು c) ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಯ ರಾಷ್ಟ್ರೀಯ ಮಂಡಳಿ (National Council of Educational Research and Training (NCERT)) ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ವಿಶ್ವವಿದ್ಯಾಲಯ (National Institute of Educational Planning and Administration (NUEPA)) ಹಾಗೂ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (University Grants Commission (UGC)) ಮುಂತಾದ ಸಂಸ್ಥೆಗಳಿರುತ್ತವೆ.

### ಚಿತ್ರ –5: ಪ್ರಾಥಮಿಕ ಶಿಕ್ಷಣದಲ್ಲಿ ಆಡಳಿತಾತ್ಮಕ ಬೆಂಬಲ ವ್ಯವಸ್ಥೆ

### ರಾಜಕೀಯ/ಸ್ಥಳೀಯ ಸಂಸ್ಥೆಗಳು, ಪ್ರಾಥಮಿಕ ಶಿಕ್ಷಣದಲ್ಲಿನ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಬೆಂಬಲ ಸಂರಚನೆ

| **ಹಂತ** | **ರಾಜಕೀಯ/ ಸ್ಥಳೀಯ ಸಂಸ್ಥೆಗಳು** | **ಆಡಳಿತಾತ್ಮಕ** | **ಶೈಕ್ಷಣಿಕ ಬೆಂಬಲ** |
|---|---|---|---|
| ರಾಜ್ಯ | ರಾಜ್ಯ ಶಿಕ್ಷಣ ಸಚಿವಾಲಯ | ಸಚಿವಾಲಯ/ ಶೈಕ್ಷಣಿಕ ನಿರ್ದೇಶನಾಲಯ | ಎಸ್‌ಸಿಇಆರ್‌ಟಿ |
| ಜಿಲ್ಲೆ | ಜಿಲ್ಲಾ ಪಂಚಾಯತಿ | ಜಿಲ್ಲಾ ಶಿಕ್ಷಣ ಕಛೇರಿ | ಡಿಐಇಟಿ |
| ವಿಭಾಗ/ ಉಪವಿಭಾಗ ತಾಲೂಕ / ಮಂಡಲ್ | ಬ್ಲಾಕ್ ಪಂಚಾಯತಿ | ಬ್ಲಾಕ್ ಶಿಕ್ಷಣ ಕಛೇರಿ/ ಶಾಲಾ ತನಿಖಾಧಿಕಾರಿ ಕಛೇರಿ | ಬ್ಲಾಕ್ ಸಂಪನ್ಮೂಲ ಕೇಂದ್ರಗಳು/ ಸಮೂಹ ಸಂಪನ್ಮೂಲ ಕೇಂದ್ರಗಳು* |
| ಗ್ರಾಮ | ಗ್ರಾಮ ಪಂಚಾಯತಿ, ** ಗ್ರಾಮ ಶಿಕ್ಷಣ ಸಮಿತಿ | ಮುಖ್ಯೋಪಾಧ್ಯಾಯರು | ಅಧ್ಯಾಪಕರು |


*ಈ ರಚನೆಗಳು ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯಿಂದ ಅಥವಾ ಅಂತಹುದೇ ಇತರ ಯೋಜನೆಗಳಿಂದ ನಿರ್ಮಿಸಲ್ಪಟ್ಟಿರುತ್ತದೆ. ಆದ್ದರಿಂದ, ಇವು ಪ್ರತಿ ಜಿಲ್ಲೆಯಲ್ಲಿರದೆಯೂ ಇರಬಹುದು.

**ಜನಸಂಖ್ಯೆಗನುಗುಣವಾಗಿ ಒಂದು ಗ್ರಾಮ ಪಂಚಾಯಿತಿಯು ನಾಲ್ಕರಿಂದ ಎಂಟು ಹಳ್ಳಿಗಳನ್ನೊಳಗೊಂಡ ಒಂದು ಸಮೂಹವನ್ನು ಹೊಂದಿರುತ್ತದೆ.

**ಮೂಲ:** ಜ್ಯೋತ್ಸ್ನಾನ ಝಾ, ಕೆ.ಬಿ.ಸಿ. ಸಕ್ಸೇನಾ ಮತ್ತು ಸಿ.ವಿ. ಭಕ್ಷಿ, (2001), "Management Processes in Elementary Education: A study of existing practices in selected states in India (ಪ್ರಾಥಮಿಕ ಶಿಕ್ಷಣದಲ್ಲಿ ನಿರ್ವಹಣಾತ್ಮಕ ಪ್ರಕ್ರಿಯೆಗಳು: ಹಲವು ಆಯ್ದ ರಾಜ್ಯಗಳಲ್ಲಿನ ಪ್ರಸಕ್ತ ಆಚರಣೆಗಳ ಅಧ್ಯಯನ)."

Available at: <**http://www.delind.cec.eu.int/en/pressandinfo/publications/management_processes.doc**>


**ಚಿತ್ರ 6: ಭಾರತದಲ್ಲಿ ಪ್ರಾಥಮಿಕ ಶಿಕ್ಷಣ ನಿರ್ವಹಣೆಗೆ ರಾಜ್ಯಮಟ್ಟದ ಸಂಘಟನಾತ್ಮಕ ರಚನೆ**




**ಮೂಲ:** ಜ್ಯೋತ್ಸ್ನಾ ಝಾ, ಕೆ.ಬಿ.ಸಿ. ಸಕ್ಸೇನಾ ಮತ್ತು ಸಿ.ವಿ. ಭಕ್ಷಿ, (2001), "Management Processes in Elementary Education: A study of existing practices in selected states in India (ಪ್ರಾಥಮಿಕ ಶಿಕ್ಷಣದಲ್ಲಿ ನಿರ್ವಹಣಾತ್ಮಕ ಪ್ರಕ್ರಿಯೆಗಳು: ಹಲವು ಆಯ್ದ ರಾಜ್ಯಗಳಲ್ಲಿನ ಪ್ರಸಕ್ತ ಆಚರಣೆಗಳ ಅಧ್ಯಯನ.)"

Available at: <**http://www.delind.cec.eu.int/en/pressandinfo/publications/management_processes.doc**>

## ಚಿತ್ರ 7: ರಾಜ್ಯ ಮಟ್ಟಕ್ಕಿಂತಲೂ ಕೆಳ ಸ್ತರದಲ್ಲಿರುವ ಆಡಳಿತಾತ್ಮಕ ರಚನೆ




**ಗಮನಿಸಿ:** *ಒರಿಸ್ಸಾ ರಾಜ್ಯದಲ್ಲಿ ಜಿಲ್ಲಾ ಶಿಕ್ಷಣ ಅಧೀಕ್ಷಕರು (ಸೂಪರಿಂಟೆಂಡೆಂಟ್) ಸರ್ವ ಶಿಕ್ಷಣ ಅಭಿಯಾನದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದು ಅವರನ್ನು ಜಿಲ್ಲಾ ಪ್ರಾಜೆಕ್ಟ್ ಕೋಆರ್ಡಿನೇಟರ್ (DPC) ಎಂದೂ ಕರೆಯಲಾಗುತ್ತದೆ.


**ಮೂಲ:** ಜ್ಯೋತ್ಸ್ನಾ ಝಾ, ಕೆ.ಬಿ.ಸಿ. ಸಕ್ಸೇನಾ ಮತ್ತು ಸಿ.ವಿ. ಭಕ್ಷಿ, (2001), "Management Processes in Elementary Education: A study of existing practices in selected states in India (ಪ್ರಾಥಮಿಕ ಶಿಕ್ಷಣದಲ್ಲಿ ನಿರ್ವಹಣಾತ್ಮಕ ಪ್ರಕ್ರಿಯೆಗಳು: ಹಲವು ಆಯ್ದ ರಾಜ್ಯಗಳಲ್ಲಿನ ಪ್ರಸಕ್ತ ಆಚರಣೆಗಳ ಅಧ್ಯಯನ.)"

Available at: <**http://www.delind.cec.eu.int/en/pressandinfo/publications/management_processes.doc**>

## ಚಿತ್ರ- 8: ಕೆಲವು ರಾಜ್ಯಗಳಲ್ಲಿನ ಪ್ರಾಥಮಿಕ ಶಿಕ್ಷಣದ ಹೊಸ ಸಂಘಟನಾತ್ಮಕ ರಚನೆ.

## ನಿರ್ಧಾರಾತ್ಮಕ ಅಂಗ ಕಾರ್ಯನಿರ್ವಾಹಕ ಅಂಗ ಶೈಕ್ಷಣಿಕ ಅಂಗ

**ನಿರ್ಧಾರತ್ಮಕ ಅಂಗ** | **ಕಾರ್ಯನಿರ್ವಾಹಕ ಅಂಗ** | **ಶೈಕ್ಷಣಿಕ ಅಂಗ**



**ಗ್ರಾಮ ಪಂಚಾಯತಿ / ಮುನಿಸಿಪಲ್ ಅಂಗಗಳು**

↓ ↑

**ಗ್ರಾಮ / ವಾರ್ಡ್ ಶಿಕ್ಷಣ ಸಮಿತಿಗಳು**

ಇವುಗಳ ಜವಾಬ್ದಾರಿ:

- ಶಾಲಾ ಮೇಲುಸ್ತುವಾರಿ
- ಅಧ್ಯಾಪಕರ ಹಾಜರಾತಿ ದೃಢಪಡಿಸುವುದು ಹಾಗೂ ರಜೆ ಮಂಜೂರು
- ಅಧ್ಯಾಪಕರ ವಿರುದ್ಧ ಶಿಸ್ತಿನ ಕ್ರಮದ ಶಿಫಾರಸ್ಸು
- ಶಾಲಾ ಸಾದಿಲ್ವಾರು ನಿಧಿ (contingent fund) ಬಳಕೆ
- ಶಾಲಾ ಅಭಿವೃದ್ಧಿಗಾಗಿ ಸಂಪನ್ಮೂಲ ಕ್ರೋಢೀಕರಣ

**ಮೂಲ:** ಜ್ಯೋತ್ಸ್ನಾ ಝಾ, ಕೆ.ಬಿ.ಸಿ. ಸಕ್ಸೇನಾ ಮತ್ತು ಸಿ.ವಿ. ಭಕ್ಷಿ, (2001), "Management Processes in Elementary Education: A study of existing practices in selected states in India (ಪ್ರಾಥಮಿಕ ಶಿಕ್ಷಣದಲ್ಲಿ ನಿರ್ವಹಣಾತ್ಮಕ ಪ್ರಕ್ರಿಯೆಗಳು: ಹಲವು ಆಯ್ದ ರಾಜ್ಯಗಳಲ್ಲಿನ ಪ್ರಸಕ್ತ ಆಚರಣೆಗಳ ಅಧ್ಯಯನ.)"

Available at: <**http://www.delind.cec.eu.int/en/pressandinfo/publications/management_processes.doc**>

**ಮೂಲ:** CBGA(2007). Primer on Budget Analysis: The case of elementary education. Centre for Budget and Governance Accountability